# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1209
ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ್
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 19.12.2024
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತುಂಗಭದ್ರಾ ಡ್ಯಾಂನ ಕ್ರಸ್ಟ್ ಗೇಟ್ ಮುರಿದಿರುವುದಕ್ಕೆ ನಿಖರವಾದ ಕಾರಣಗಳೇನು ಹಾಗೂ ಕಾರಣರಾದವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆಯೇ; (ಮಾಹಿತಿ ನೀಡುವುದು) | ತುಂಗಭದ್ರಾ ಯೋಜನೆಯು ಅಂತರ ರಾಜ್ಯ ಯೋಜನೆಯಾಗಿದ್ದು (ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು), ತುಂಗಭದ್ರಾ ಅಣೆಕಟ್ಟೆಯ ಗೇಟುಗಳ ನಿರ್ವಹಣೆಯು ತುಂಗಭದ್ರಾ ಮಂಡಳಿಯ ವ್ಯಾಪ್ತಿಯಲ್ಲಿರುತ್ತದೆ.<br><br>ದಿನಾಂಕ:10.08.2024ರಂದು ತುಂಗಭದ್ರಾ ಅಣೆಕಟ್ಟೆಯ Spillway gate No.19 ಚೈನ್ ಲಿಂಕ್‌ನೊಂದಿಗೆ ಸಂಪರ್ಕ ಕಡಿತಗೊಂಡು spillway grooveನಿಂದ ಗೇಟ್ ಕೊಚ್ಚಿಹೋಗಿರುವ ಘಟನೆಗೆ ಕಾರಣವಾದ ಅಂಶಗಳ ಬಗ್ಗೆ ತನಿಖೆ ನಡೆಸಲು ತುಂಗಭದ್ರಾ ಮಂಡಳಿಯು ಶ್ರೀ ಎ.ಕೆ.ಬಜಾಜ್, ಇವರ ಅಧ್ಯಕ್ಷತೆಯಲ್ಲಿ Technical Enquiry Committeeಯನ್ನು ರಚಿಸಿರುತ್ತದೆ. ಸದರಿ ತನಿಖಾ ಸಮಿತಿಯು ನೀಡಿರುವ ವರದಿಯನ್ವಯ ಘಟನೆಗೆ ಈ ಕೆಳಕಂಡ ಅಂಶಗಳು ಕಾರಣವಾಗಿರುವುದಾಗಿ ತುಂಗಭದ್ರಾ ಮಂಡಳಿಯು ವರದಿ ಮಾಡಿರುತ್ತದೆ:<br><br>The *gates are 70 years old and suffered significant deterioration from aging, material loss and structural weakening. Due to fatigue, the chain links, vital for gate operations, have become regid, worn over time. Heavy flooding exerted excessive pressure on weakend sections, causing shear failure, particularly at weld joints between the end vertical girder, horizontal girders, and skin plates. De-linking of chain sequentially led to the collapse of critical structural members, detachment from the wheel bogie, and eventual washing away of the gate downstream.*<br><br>ಮೇಲ್ಕಂಡ ತನಿಖಾ ಸಮಿತಿಯ ವರದಿಯಲ್ಲಿನ ಅಂಶಗಳನ್ನು ಗಮನಿಸಿದಲ್ಲಿ, ತುಂಗಭದ್ರಾ ಅಣೆಕಟ್ಟಿಗೆ ಅಳವಡಿಸಿರುವ ಗೇಟುಗಳು 70 ವರ್ಷಗಳಷ್ಟು ಹಳೆಯದಾಗಿದ್ದು, ಚೈನ್ ಲಿಂಕ್ ಕಾಲಾನಂತರದಲ್ಲಿ ಸವೆದು, ದುರ್ಬಲವಾಗಿರುವ ಹಿನ್ನೆಲೆಯಲ್ಲಿ ಹಾಗೂ ಪ್ರವಾಹದ ಒತ್ತಡದಿಂದಾಗಿಯೂ ವೈಫಲ್ಯವಾಗಿರುವುದು ಕಂಡುಬರುತ್ತದೆ.<br><br>ಈ ಹಿನ್ನೆಲೆಯಲ್ಲಿ, Comprehensive structural health check ಮಾಡುವ ಪ್ರಸ್ತಾವನೆಯು ತುಂಗಭದ್ರಾ ಮಂಡಳಿಯ ಪರಿಶೀಲನೆಯಲ್ಲಿದ್ದು, ವರದಿ ಪಡೆದ ನಂತರ ಅಗತ್ಯತೆಯನುಸಾರ ಹೊಸ ಗೇಟುಗಳನ್ನು ಅಳವಡಿಸುವ ಬಗ್ಗೆ ತುಂಗಭದ್ರಾ ಮಂಡಳಿಯಿಂದ ಕ್ರಮವಹಿಸಲಾಗುತ್ತದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಸದರಿ ಗೇಟ್‌ನ್ನು ದುರಸ್ಥಿಗೊಳಿಸಲು ವೆಚ್ಚ ಮಾಡಲಾಗಿರುವ ಹಣವೆಷ್ಟು; (ವಿವರ ನೀಡುವುದು) | ತುಂಗಭದ್ರಾ ಅಣೆಕಟ್ಟೆಯ Spillway gate No.19 ಕೊಚ್ಚಿಹೋಗಿರುವ ಹಿನ್ನೆಲೆಯಲ್ಲಿ, ರೂ.3.14 ಕೋಟಿ ಮೊತ್ತದಲ್ಲಿ ತುಂಗಭದ್ರಾ ಮಂಡಳಿಯಿಂದ ಹೊಸ Stop log gate ಅಳವಡಿಸಲಾಗಿದೆ. |
| ಇ) | ದುರಸ್ಥಿ ಮಾಡಿದ ಸಂಸ್ಥೆಯವರಿಗೆ ಬಿಲ್ ಪಾವತಿಸಲಾಗಿದೆಯೇ; ಸದರಿ ಸಂಸ್ಥೆಯವರಿಗೆ ಬಿಲ್ ಪಾವತಿ ಮಾಡಿದ್ದಲ್ಲಿ ಎಷ್ಟು ಮೊತ್ತ ಪಾವತಿ ಮಾಡಲಾಗಿದೆ; (ವಿವರ ನೀಡುವುದು) | ಹೊಸ Stop log gate ಅಳವಡಿಸಿದ ಕಾಮಗಾರಿಗೆ ಬಿಲ್ ಪಾವತಿಯಾಗಿರುವುದಿಲ್ಲ. ತುಂಗಭದ್ರಾ ಮಂಡಳಿಗೆ ಆಂಧ್ರ ಪ್ರದೇಶ ಸರ್ಕಾರದಿಂದ ಅನುದಾನ ಹಂಚಿಕೆ ಬಾಕಿ ಇದ್ದು, ತದನಂತರದಲ್ಲಿ, ಬಿಲ್ಲುಗಳನ್ನು ಪಾವತಿಸಲಾಗುವುದೆಂದು ತುಂಗಭದ್ರಾ ಮಂಡಳಿ ತಿಳಿಸಿದೆ. |
| ಈ) | ಹಾಗಿಲ್ಲದಿದ್ದಲ್ಲಿ ಬಿಲ್ ಮೊತ್ತವನ್ನು ಪಾವತಿಸದಿರಲು ಕಾರಣಗಳೇನು; ಎಷ್ಟು ಸಮಯದೊಳಗೆ ಬಿಲ್ ಪಾವತಿಸಲಾಗುವುದು; (ಮಾಹಿತಿ ನೀಡುವುದು) | |
| ಉ) | ದುರಸ್ಥಿ ಕಾರ್ಯವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಯೋಗದಲ್ಲಿ ಮಾಡಲಾಗಿದೆಯೇ; ಹಾಗಿದ್ದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶೇಕಡಾವಾರು ಪಾಲಿನ ವಿವರ ನೀಡುವುದು? | ತುಂಗಭದ್ರಾ ಯೋಜನೆಯಡಿ ಅಣೆಕಟ್ಟು ನಿರ್ವಹಣೆಗೆ ಕರ್ನಾಟಕ ರಾಜ್ಯ ಶೇ.44.44 ಹಾಗೂ ಆಂಧ್ರಪ್ರದೇಶ ರಾಜ್ಯ ಶೇ.55.56ರಷ್ಟು ಅನುದಾನವನ್ನು ತುಂಗಭದ್ರಾ ಮಂಡಳಿಗೆ ನೀಡಲಾಗುತ್ತಿದ್ದು, ಮಂಡಳಿಗೆ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಇರುವುದಿಲ್ಲ. |

ಸಂಖ್ಯೆ:ಜಸಂಇ 160 ಎಂಎಲ್‌ಎ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ